

# ಮಡುರೋಡಾಮ್

## ಚಿಕಣಿ ಮಾದರಿಗಳ ಮಾಯಾಲೋಕ

ಮಡುರೋಡಾಮ್ ಥೀಮ್ ಪಾರ್ಕ್ ಹಾಲೆಂಡ್‌ನ ಸಾಂಸ್ಕೃತಿಕ, ಚಾರಿತ್ರಿಕ ವೈಭವದ ಕನ್ನಡಿಯಂತಿದೆ. ಇಲ್ಲಿ ಕಳೆಯುವ ಕೆಲವು ತಾಸುಗಳಲ್ಲಿ ಇಡೀ ದೇಶವನ್ನು ನೋಡಿದ ಅನುಭವವನ್ನು ಪಡೆಯಬಹುದು.

■ ಜಿ. ನಾಗೇಂದ್ರ ಕಾವೂರು

ಯುರೋಪ್ ದೇಶಗಳಲ್ಲೇ ಹಾಲೆಂಡ್ (ನೆದರ್‌ಲ್ಯಾಂಡ್ಸ್) ತನ್ನದೇ ಆತ ಅನನ್ಯತೆಯನ್ನು ಹೊಂದಿರುವ ದೇಶ. ಸಮುದ್ರ ಮಟ್ಟಕ್ಕಿಂತಲೂ ಕೆಳಗಿರುವ, ಸಮತಟ್ಟಾದ ಭೂ ಪ್ರದೇಶವನ್ನು ಹೊಂದಿರುವ ಹಾಲೆಂಡ್‌ನಲ್ಲಿ ಸಾವಿರಾರು ಕಾಲುವೆಗಳಿವೆ. ಈ ಕಾಲುವೆಗಳ (ಕೆನಾಲ್‌ಗಳ) ಇಕ್ಕೆಲಗಳಲ್ಲಿ ನಿರ್ಮಿಸಲಾಗಿರುವ ಕಟ್ಟಡಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ. ರಾಜಕಾರಣ, ಸಾಂಸ್ಕೃತಿಕ, ಐತಿಹಾಸಿಕ ಭವ್ಯ ಪರಂಪರೆಯನ್ನು ಹೊಂದಿರುವ ಹಾಲೆಂಡ್‌ನ ಪ್ರತಿಯೊಂದು ನಗರದಲ್ಲೂ ಹಲವು ವಿಶೇಷಗಳನ್ನು ಕಾಣಬಹುದಾಗಿದೆ. ಅಂಥದೊಂದು ವಿಶಿಷ್ಟ ಸ್ಥಳ ದಕ್ಷಿಣ ಹಾಲೆಂಡ್‌ನ 'ದಿ ಹೇಗ್' (ಡಚ್: ಡೆನ್ ಹಾಗ್) ಪ್ರಾಂತ್ಯದ ಸ್ಕೇವೆನಿನ್‌ನಲ್ಲಿ ಇರುವ 'ಮಡುರೋಡಾಮ್ (ಡಚ್: ಮದ್ಯುರೋದಮ್) ಮಿನಿಯೇಚರ್ ಥೀಮ್ ಪಾರ್ಕ್'.

ಡಚ್ ಸಂಸ್ಕೃತಿಯ ಹೆಗ್ಗುರುತುಗಳು, ಐತಿಹಾಸಿಕ ಕಟ್ಟಡಗಳು ಸೇರಿದಂತೆ ಹಲವು ವಿಶೇಷಗಳನ್ನು ಹೊಂದಿರುವ 'ಮಡುರೋಡಾಮ್' ನಾಲ್ಕು ಎಕರೆ ಪ್ರದೇಶದಲ್ಲಿ ವ್ಯಾಪಿಸಿಕೊಂಡಿದೆ. ಇಷ್ಟು ಪುಟ್ಟ ಜಾಗದಲ್ಲಿಯೇ ಇಡೀ ಹಾಲೆಂಡನ್ನು ನೋಡಿದ ಅನುಭವವನ್ನು ನೀಡುವುದು ಈ ಥೀಮ್ ಪಾರ್ಕ್‌ನ ಹೆಗ್ಗಳಿಕೆ.

'ನೀರು, ಮಿತ್ರ ಹಾಗೂ ಶತ್ರು', 'ಚಾರಿತ್ರಿಕ ನಗರಗಳು' ಹಾಗೂ 'ನೆದರ್‌ಲ್ಯಾಂಡ್ಸ್ ವಿಶ್ವಕ್ಕೆ ಸ್ಫೂರ್ತಿ' – ಈ ಮೂರು ವಿಷಯಗಳನ್ನು ಆಧರಿಸಿ 'ಮಡುರೋಡಾಮ್ ಮಿನಿಯೇಚರ್ ಥೀಮ್ ಪಾರ್ಕ್' ಅನ್ನು ರೂಪಿಸಲಾಗಿದೆ. ಈ ಥೀಮ್ ಪಾರ್ಕ್‌ನಲ್ಲಿ ಒಮ್ಮೆ ಅಡ್ಡಾಡಿದರೆ ಸಾಕು ಅನಿರ್ವಚನೀಯ ಅನುಭವ ಸಹೃದಯರದಾಗುತ್ತದೆ.

1952ರಲ್ಲಿ ಸಹೃದಯರ ವೀಕ್ಷಣೆಗೆ ಮುಕ್ತವಾದ ಈ ಉದ್ಯಾನವನ 2012ರಲ್ಲಿ 60ನೇ ವಾರ್ಷಿಕೋತ್ಸವವನ್ನು ಆಚರಿಸಿಕೊಂಡಿತು. ಆ ಸಂದರ್ಭದಲ್ಲಿ ದೊಡ್ಡ ಪ್ರಮಾಣದಲ್ಲಿ ಉದ್ಯಾನವನ್ನು ನವೀಕರಿಸಲಾಯಿತು. 1940ರಲ್ಲಿ